ರಸ್ತೆಯ ಬದಿಯ ದರ್ಶಿನಿಯಲ್ಲಿ ಹಾಗೂ ಐಷಾರಾಮಿ ಹೋಟೆಲೊಂದರಲ್ಲಿ ತಿಂಡಿ ತಿನ್ನುವ ಅನುಭವದ ವ್ಯತ್ಯಾಸವನ್ನೇ ಗಮನಿಸಿ. ಇಲ್ಲಿ ಹೊಟೇಲಿನ ಮೆಟ್ಟಿಲೇರುತ್ತಲೇ ದ್ವಾರಪಾಲಕ ಬಗ್ಗಿ ನಮಸ್ಕರಿಸುವುದರಿಂದ ಶುರುವಾಗಿ, ನೀವು ಪುನಃ ಕಾರೇರುವವರೆಗೂ ನಿಮಗೆದುರಾಗುವುದು ನಯವಂತಿಕೆ. ದರ್ಶಿನಿಯಲ್ಲಿ ಸಿಗುವ ಆಹಾರವನ್ನೇ ಇಲ್ಲಿ ದುಪ್ಪಟ್ಟು ಬೆಲೆಗೆ ಮಾರುವಾಗ, ಈ ವಿನಯದ ಪೋಷಾಕು ಅನಿವಾರ್ಯವಾಗುತ್ತದಷ್ಟೇ. ಅದೇ ರೀತಿ, ವಿಮಾನದ ಗಗನಸಖಿಯ, ಆಭರಣ ಮಳಿಗೆಯ ಸ್ವಾಗತಕಾರಿಣಿಯ ತುಟಿಯ ನಗು ನಮಗೆ ತರಕಾರಿ ಮಂಡಿಯ ಹೆಂಗಸಿನ ಮೊಗದಲ್ಲಿ ಕಾಣಸಿಗುವುದಿಲ್ಲ.

'ಹಿರಣ್ಮಯೇನ ಪಾತ್ರೇಣ ಸತ್ಯ ಸ್ಯಾಪಿಹಿತಂ ಮುಖಮ್' – ಬಂಗಾರದ ಪಾತ್ರೆಯಿಂದ ಸತ್ಯದ ಮುಖ ಮುಚ್ಚಲಾಗಿದೆ, ಸತ್ಯ ನನಗೆ ಕಾಣುವುದಕ್ಕಾಗಿ ನೀನು ಅದನ್ನು ತೆಗೆ' ಎಂದು ಸೂರ್ಯನಲ್ಲಿ ಬೇಡುವ ಶ್ಲೋಕವೊಂದು ಉಪನಿಷತ್ತಿನಲ್ಲಿದೆ. ಮೇಲ್ನೋಟಕ್ಕೆ ಸುಂದರ, ನಯವಾಗಿ ತೋರ್ಪಡುವುದರ ಉದ್ದೇಶ ಸತ್ಯವನ್ನು ಮರೆಮಾಚುವುದೇ ಆಗಿದೆ ಎನ್ನುವ ಅರ್ಥದಲ್ಲೂ ನಾವಿದನ್ನು ನೋಡಬಹುದಲ್ಲವೇ? ಹೌದೆಂದಾದರೆ ನಯ–ವಿನಯವೂ ಒಂದು ಮುಖವಾಡವೇ. ಅದು ಮನುಷ್ಯನ ಸಾವಯವ ಸ್ವಭಾವವೂ ಅಲ್ಲ. ಕಷ್ಟಪಟ್ಟೋ, ಅನಿವಾರ್ಯಕ್ಕೋ ನಾವು ರೂಢಿಸಿಕೊಂಡಿದ್ದು.

ಇಂತಿಪ್ಪ (ನಯವಂತಿಕೆಯನ್ನು ಇಂದು ಯಥೇಚ್ಛವಾಗಿ ಬಳಸಿಕೊಳ್ಳುತ್ತಿರುವುದು ನಮ್ಮ ಕಾರ್ಪೊರೇಟ್ ಕ್ಷೇತ್ರ. ಕೆಮ್ಮಿದರೂ ಸೀನಿದರೂ 'ಎಕ್ಸ್‌ಕ್ಯೂಸ್ ಮಿ' ಎನ್ನಬೇಕೆಂದು ಹೇಳಿಕೊಟ್ಟವರೇ ಅವರು. ಚಹವನ್ನು ಸೊರ್ರನೆ ಹೀರಬಾರದೆಂಬ ಪಾಠ ಕೂಡಾ ಅವರದೇ. ಜಾಕೆಟ್ ತೋಳಿನ ಕೈಯಿಂದ ಸಹಜವಾಗಿ ಬಾಟಲಿ ನೀರನ್ನು ಎತ್ತಿ ಕುಡಿದು ಇನ್ನೊಂದು ಕೈಯಿಂದ ಬಾಯಿ ಒರೆಸಿಕೊಳ್ಳಲಾಗುವುದಿಲ್ಲ ಅಲ್ಲಿ) ಮೀಟಿಂಗ್ ಹಾಲಿಗೂ, ಡೈನಿಂಗ್ ಹಾಲಿಗೂ ತನ್ನದೇ ಆದ 'ಎಟಿಕೆಟ್' ಇದೆ ಹಾಗೂ ಅವುಗಳಲ್ಲೆಲ್ಲ ಕೃತಕತೆಯ ಲೇಪವಿದೆ. ನಾನು ಹೇಳುತ್ತಿರುವುದು ತುಸು ಅತಿರೇಕವೆನಿಸಿದರೆ ಕ್ಷಮಿಸಿ. ಹವಾನಿಯಂತ್ರಿತ ಕಚೇರಿಯ ಈ ಸೊಫೆಸ್ಟಿಕೇಟೆಡ್ ಜನ, 'ಪ್ಲೀಸ್', 'ಗ್ರೇಟ್', 'ಮೇ ಐ' ಇತ್ಯಾದಿ ಪದಗಳನ್ನು ಬಳಸುವಾಗಲೆಲ್ಲ ನನಗೆ ಹಿರಣ್ಣಯ್ಯನವರ 'ದೇವದಾಸಿ' ನಾಟಕದ ತಲೆಹಿಡುಕ 'ನಾಜೂಕಯ್ಯ'ನೇ ನೆನಪಿಗೆ ಬರುತ್ತಾನೆ.

ಬಹಿರಂಗ ಶುದ್ಧಿಗಿಂತ ಅಂತರಂಗ ಶುದ್ಧಿಗೇ ಹೆಚ್ಚಿನ ಪ್ರಾಶಸ್ತ್ಯ ನೀಡುವ ಭಾರತೀಯ ಸಂಸ್ಕೃತಿಯಲ್ಲಿ, ಈ ನಯದ ಹುಳ ನುಸುಳಿತಾದರೂ ಎಲ್ಲಿಂದ? ಅದು ಯುರೋಪಿಯನ್ನರ ಬಳುವಳಿ ಎಂಬುದು ನನ್ನ ಅಂದಾಜು. **sophist** ಎನ್ನುವ ಗ್ರೀಕ್ ಪದದ ಮೂಲದಿಂದಲೇ ಈ **sophisticate** ಎನ್ನುವ ಶಬ್ದ ಹುಟ್ಟಿಕೊಂಡದ್ದು. ಸೊಫಿಸ್ಟ್ ಅಂದರೆ – ಯಾವುದೇ ವಿಷಯವನ್ನು ಅದರ ಸತ್ಯಾಸತ್ಯತೆಯ ಹಂಗಿಲ್ಲದೇ, ತನ್ನ ಬುದ್ಧಿವಂತಿಕೆ, ಚಾಲಾಕಿತನವನ್ನು ಬಳಸಿ ಇತರರಿಗೆ ಮನವರಿಕೆ ಮಾಡಿಕೊಡುವ ವ್ಯಕ್ತಿ. ಕ್ರಿಸ್ತಪೂರ್ವದ ಯುರೋಪಿನಲ್ಲಿ ಈ ಸೊಫಿಸ್ಟುಗಳ ಹಾವಳಿ ಸಾಕಷ್ಟು ಇತ್ತಂತೆ ಹಾಗೂ ಅಲ್ಲಿಂದಲೇ ಅದು ಉಳಿದೆಡೆಯೂ ಪಸರಿಸಿದ್ದು. ಹೀಗೆ 'ದಿಟವಲ್ಲದ್ದನ್ನು ತೋರ್ಪಡಿಸುವ' ಅಥವಾ 'ಹುಸಿ ಆಡಂಬರದ' ಎನ್ನುವ ಅರ್ಥದಲ್ಲಿ ಬಳಸಲಾದ ಸೊಫಿಸ್ಟಿಕೇಟ್ ಎನ್ನುವ ಶಬ್ದ, ಕಾಲಾಂತರದಲ್ಲಿ ತನ್ನದೇ ಅರ್ಥ ಪಡೆದುಕೊಂಡಿರಬಹುದು. ಹಾಗೂ ಅದಕ್ಕೇ ಮುಂದೆ ಸಮಾಜದಲ್ಲೊಂದು ಸ್ಥಾನಮಾನ, ಗೌರವವೂ ದೊರೆತಿರಬಹುದು.

ಪಂಜೆ ಮಂಗೇಶರಾಯರು, ಬ್ರಿಟಿಷರನ್ನು ನಾಗರಹಾವಿಗೆ ಹೋಲಿಸಿ ರಚಿಸಿದ ಕವನದ ಈ ಸಾಲುಗಳು, ಮೇಲಿನ ಮಾತಿಗೆ ಪೂರಕವಾಗಿವೆ: